ದಿನಾಂಕ: ೨೭-೦೭-೨೦೦೫

# ಕರ್ನಾಟಕದ ಸನ್ಮಾನ್ಯ ಶಾಸಕರುಗಳಿಗೆ ಒಂದು ಬಹಿರಂಗ ಮನವಿ

**ವಿಷಯ: ಕುದುರೆಮುಖ ಗಣಿಗಾರಿಕೆಯನ್ನು ಕೊನೆಗಾಣಿಸಿ ಭದ್ರಾ ನದಿಯನ್ನು ಸಂರಕ್ಷಿಸುವ ಸಲುವಾಗಿ ಹಿಂದೊಮ್ಮೆ ಕರ್ನಾಟಕ ಸರ್ಕಾರ ಹೊರಡಿಸಿದ್ದ ಆಜ್ಞೆಯನ್ನು ಜಾರಿ ಮಾಡುವ ಬಗ್ಗೆ.**

ಗೌರವಾನ್ವಿತ ಶಾಸಕರೆ,

ತಾವೆಲ್ಲಾ ತಿಳಿದಿರುವಂತೆ ೨೦೦೧ ಇಸ್ವಿಯಲ್ಲಿ ಸಾರ್ವಜನಿಕರ ಒತ್ತಾಯದ ಮೇರೆಗೆ ಕುದುರೆಮುಖ ಗಣಿಗಾರಿಕೆಯ ಬಗ್ಗೆ ಎರಡು ಸದನಗಳಲ್ಲೂ ವ್ಯಾಪಕವಾಗಿ ಚರ್ಚೆ ನಡೆದನಂತರ ಭದ್ರಾ ನದಿಯನ್ನೂ ಪಶ್ಚಿಮ ಘಟ್ಟಗಳನ್ನೂ ಸಂರಕ್ಷಿಸುವ ಸಲುವಾಗಿ ಸರ್ಕಾರ ಹಲವು ನ್ಯಾಯೋಚಿತ ನಿರ್ಣಯಗಳನ್ನು ಕೈಗೊಂಡು, ಕುದುರೆಮುಖ ರಾಷ್ಟ್ರೀಯ ಉದ್ಯಾನದ ವ್ಯಾಪ್ತಿಯಲ್ಲಿ ಸರ್ಕಾರದ ಸಮ್ಮತಿಯಿಂದಲೇ ನಡೆದ ವೈಜ್ಞಾನಿಕ ವೀಕ್ಷಣೆ ವಿಶ್ಲೇಷಣೆಗಳಿಂದ ಕನಿಷ್ಠ ದರ್ಜೆಯ ಕಬ್ಬಿಣದ ಅದುರಿಗಾಗಿ ವರ್ಷಕ್ಕೆ ಏಳುಸಾವಿರ ಮಿ.ಮಿ.ಗಿಂತ ಹೆಚ್ಚು ಮಳೆಯಾಗುವ ಈ ಜಾಗದಲ್ಲಿ ನಡೆಸುತ್ತಿರುವ ಗಣಿಗಾರಿಕೆಯನ್ನು ಸಂಪೂರ್ಣ ನಿಷೇಧಿಸಲು ನಿರ್ಧರಿಸಿ ಆಜ್ಞೆ ಹೊರಡಿಸಿತು.

ಈ ಮಹತ್ವದ ಐತಿಹಾಸಿಕ ತೀರ್ಮಾನಕ್ಕೆ ಮೊದಲನೆ ಕಾರಣ:
ಕುದುರೆಮುಖ ರಾಷ್ಟ್ರೀಯ ಉದ್ಯಾನದ ಉಷ್ಣವಲಯದ ಕಾಡುಗಳು ನಾವು ಊಹಿಸಲಸಾಧ್ಯವಾದಷ್ಟು ವೈವಿಧ್ಯಮಯ ಸಸ್ಯ ಮತ್ತು ಜೀವಸಂಕುಲಗಳಿಂದ ಕೂಡಿದೆ. ಇದನ್ನು ಕಳೆದುಕೊಂಡರೆ ಪುನರ್ನಿರ್ಮಿಸಲು ನಮ್ಮಿಂದ ಸಾಧ್ಯವೇ ಇಲ್ಲ. ಇದರ ಅವಸಾನದಿಂದ ದೇಶಕ್ಕೆ, ಜಗತ್ತಿಗೆ, ಮಾನವ ಸಂಕುಲಕ್ಕೆ ಆಗುವ ನಷ್ಟವನ್ನು ಹಣದ ಮೊತ್ತದಲ್ಲಿ ಪರಿವರ್ತಿಸಿ ಹೇಳಲು ಸಾಧ್ಯವಿಲ್ಲ.

ಎರಡನೆಯ ಕಾರಣ: ಕರ್ನಾಟಕದ ನಾಲ್ಕು ಬಹು ಮುಖ್ಯ ಜೀವನದಿಗಳು (ಭದ್ರಾನದಿ, ತುಂಗಾನದಿ, ನೇತ್ರಾವತಿ, ಹೇಮಾವತಿ) ಹುಟ್ಟುವ ಜಾಗದಲ್ಲೆ ಗಣಿಗಾರಿಕೆ ನಡೆಸುತ್ತಿರುವುದು ಈಗಾಗಲೇ ಜಲಕ್ಷಾಮವನ್ನೆದುರಿಸುತ್ತಿರುವ ಕರ್ನಾಟಕದ ಭವಿಷ್ಯಕ್ಕೆ ಕಠೋರ ಪ್ರಾಯವಾಗಿದೆ. ಸರ್ಕಾರ ಒಪ್ಪಿಕೊಂಡ ವೈಜ್ಞಾನಿಕ ವಿಶ್ಲೇಷಣೆ ಪ್ರಕಾರವೇ ೨೦೦೨ ರಿಂದ ೨೦೦೪ ಅವಧಿಯಲ್ಲಿ ಕುದುರೆಮುಖ ಗಣಿಗಾರಿಕೆಯಿಂದ ೨.೨ ಲಕ್ಷ ಟನ್ ಹೂಳು ಭದ್ರಾ ನದಿಗೂ ಭದ್ರಾ ಜಲಾಶಯಕ್ಕೂ ರವಾನೆಯಾಗಿದೆ. ಭದ್ರಾ ಜಲಾಶಯದ ಎಡದಂಡೆ ಕಾಲುವೆ ನೀರುಣಿಸುತ್ತಿರುವ ಒಂದು ಲಕ್ಷ ಹೆಕ್ಟೇರ್ ಕೃಷಿ ಜಮೀನಿಗೂ, ಲಕ್ಷಾಂತರ ರೈತರ ಭವಿಷ್ಯಕ್ಕೂ ಇದು ತಲೆಯಮೇಲಿನ ತೂಗು ಕತ್ತಿಯಾಗಿದೆ.

ಸರ್ವೋಚ್ಚ ನ್ಯಾಯಾಲಯದ ಮೂವರು ಸನ್ಮಾನ್ಯ ನ್ಯಾಯಾಧೀಶರ ಪೀಠ ವೈಲ್ಡ್‌ಲೈಫ್ ಫಸ್ಟ್ ಸಂಘಟನೆಯ ಟ್ರಸ್ಟಿಯಾಗಿರುವ ಶ್ರಿ ಕೆ.ಎಂ. ಚಿಣ್ಣಪ್ಪನವರ ಮನವಿಯನ್ನು ಪರಿಶೀಲಿಸಿ ಅಕ್ಟೋಬರ್ ೨೦೦೨ರಂದು ಮಹತ್ವದ ಐತಿಹಾಸಿಕ ತೀರ್ಪೊಂದನ್ನು ಸರ್ವಾನುಮತದಿಂದ ನೀಡಿ, ೨೦೦೫ನೆ ಇಸ್ವಿ ಡಿಸೆಂಬರ್ ೩೧ನೇ ತಾರೀಖಿಗೆ ಗಣಿಗಾರಿಕೆಯನ್ನು ಸಂಪೂರ್ಣ ನಿಲ್ಲಿಸತಕ್ಕದ್ದೆಂದು ಆದೇಶಿಸಿದ್ದಾರೆ.

ಇಷ್ಟಿದ್ದೂ ಸರ್ಕಾರದ ಮುಖಾಂತರ ತಮ್ಮ ತೀರ್ಮಾನವನ್ನು ಪುನರ್‌ಪರಿಶೀಲಿಸುವಂತೆ ಕೇಳಲು ಪ್ರಯತ್ನಗಳು ನಡೆಯುತ್ತಿವೆಯೆಂದು ಬಂದ ಸುದ್ದಿ ಮಾಧ್ಯಮಗಳ ವರದಿ ನಮಗೆ ಕಳವಳಕಾರಕವಾಗಿದೆ. ಇಲ್ಲಿ ಮಾಡಿರುವ ಪರಿಸರದ ಹಾನಿ ಮತ್ತೂ ಮುಂದುವರಿಯದಂತೆ ತಡೆಗಟ್ಟುವ ಸಲುವಾಗಿ, ಯದ್ವಾಬಿದ್ವಿ ರಾಶಿ ಹಾಕಿರುವ ಮಣ್ಣಿನ ಬೆಟ್ಟಗಳು ಮಳೆಗೆ ನದೀತಟಕ್ಕೆ ಜಾರದಂತೆ ತಡೆಗಟ್ಟುವ ಸಲುವಾಗಿ ಎಂದೆಲ್ಲ ಸಂಪೂರ್ಣ ಕ್ಷುಲ್ಲಕ ನೆವಗಳ ಆಧಾರದ ಮೇಲೆ ಇನ್ನೂ ಇಪ್ಪತ್ತು ವರ್ಷ ಗಣಿಗಾರಿಕೆ ಮುಂದುವರಿಸಲು ಸರ್ಕಾರದ ಮೇಲೆ ಒತ್ತಡ ತರಲಾಗುತ್ತಿದೆ ಎಂಬ ಪತ್ರಿಕಾವರದಿಗಳು ದಿಗಿಲಿಕ್ಕಿಸುವ ಸಂಗತಿಗಳಾಗಿವೆ. ಅಲ್ಲದೆ ಕುದುರೆಮುಖ ಕಾಡಿನೊಳಗೆ ಸೇರಿಕೊಂಡಿರುವ ಕೆಲವು ನಕ್ಸಲೀಯರ ಸಮಾಜಬಾಹಿರ ಮತ್ತು ಕಾನೂನುಬಾಹಿರ ಚಟುವಟಿಕೆಗಳನ್ನು ತಡೆಯಲು ಗಣಿಗಾರಿಕೆ ಮುಂದುವರಿಸಬೇಕೆಂಬ ಅಸಂಬದ್ಧ ವಾದವನ್ನೂ ಮುಂದಿಡುತ್ತಿದ್ದಾರೆ.

ಕುದುರೆಮುಖ ಕಂಪನಿಯವರ ಈ ಎಲ್ಲ ವಾದ ಮನವಿಗಳನ್ನು ಸರ್ವೋಚ್ಛ ನ್ಯಾಯಾಲಯ ವಿವರವಾಗಿ ಪರಿಶೀಲಿಸಿ, ಗಣಿಗಾರಿಕೆ ನಿಲ್ಲಿಸುವುದರಿಂದ ಆಗುವ ನಷ್ಟ, ಕೆಲಸಗಾರರಿಗೆ ಆಗಬಹುದಾದ ತೊಂದರೆ ಇತ್ಯಾದಿ ಸಾಧಕಬಾಧಕಗಳನ್ನೂ, ಗಣಿಗಾರಿಕೆ ಮುಂದುವರಿಸುವುದರಿಂದ ಆಗಬಹುದಾದ ಅಪಾರ ಪರಿಸರ ಹಾನಿಯ ಸಾಧಕಬಾಧಕಗಳನ್ನೂ ತೂಗಿ ನೋಡಿ ಮುಂದುವರಿಸುವುದರಿಂದಾಗುವ ವ್ಯಾಪಕ ಮತ್ತು ಆಗಾಧ ಹಾನಿಯನ್ನು ಕೂಡಲೇ ನಿಲ್ಲಿಸುವುದು ಅಗತ್ಯವೆಂದು ತೀರ್ಪು ಕೊಟ್ಟಿದ್ದಾರೆ.

ಗಣಿಗಾರಿಕೆಯ ದೆಸೆಯಿಂದ ಮುಂದೆ ಇಲ್ಲಿ ಸಂಭವಿಸಬಹುದಾದ ಭೂ ಪಾತ ತಡೆಗಟ್ಟುವ ಅವಶ್ಯಕತೆ ಇದ್ದರೂ ಅದು ಗಣಿಗಾರಿಕೆ ಮುಂದುವರಿಸುವುದಕ್ಕೆ ಸಮರ್ಥನೀಯ ಕಾರಣವೇ ಅಲ್ಲ. ಏಕೆಂದರೆ ಅದುರು ತೆಗೆದನಂತರ ಉಳಿಯುವ ಉಚ್ಛಿಷ್ಠವಾದ ಅಗಾಧಪ್ರಮಾಣದ ಕೆಸರನ್ನು ತುಂಬಲು ಈಗಾಗಲೇ ೧೫೦೦ ಲಕ್ಷ ಟನ್ ಕೆಸರು ತುಂಬಿರುವ ಲಕ್ಯ ಅಣೆಕಟ್ಟಿನಲ್ಲಿ ಜಾಗವೇ ಉಳಿದಿಲ್ಲ. ಪೂರ್ಣ ಮಟ್ಟದವರೆಗೆ ಕೆಸರು ತುಂಬಿರುವ ಲಕ್ಯಾ ಅಣೆಕಟ್ಟಿಗೆ ಇನ್ನಷ್ಟು ಕೆಸರು ತುಂಬುವುದು ಕಳಸದಿಂದ ಬಾಳೆಹೊನ್ನೂರಿನವರೆಗೆ ನದಿಯ ಅಕ್ಕಪಕ್ಕದಲ್ಲಿರುವ ಗ್ರಾಮಗಳಿಗೆಲ್ಲಾ ಮರಣಶಾಸನವಾಗುತ್ತದೆ. (೧೯೯೪ರಲ್ಲಿ ಕೆಸರಿನ ಒತ್ತಡಕ್ಕೆ ಅಣೆಕಟ್ಟಿನಲ್ಲಿ ಬಿರುಕು ಬಂದು ನದಿ ಪಕ್ಕದ ಎಲ್ಲ ಗ್ರಾಮಗಳ ಜನರನ್ನು ಸಮರದೋಪಾದಿಯಲ್ಲಿ ಸ್ಥಳಾಂತರಿಸಲಾಯ್ತು!)

ನಾವು ಮೇಲೆ ತಿಳಿಸಿರುವ ಎಲ್ಲ ಅಂಶಗಳನ್ನೂ ವಿವರವಾಗಿ ಈ ಹಿಂದೆ ಅನೇಕಸಾರಿ ತಮ್ಮ ಅವಗಾಹನೆಗೆ ತಂದಿರುವುದರಿಂದ ಅದನ್ನು ಮತ್ತೆ ವಿಸ್ತರಿಸುವ ಅವಶ್ಯಕತೆ ಇಲ್ಲ. ಕರ್ನಾಟಕ ಸರ್ಕಾರ ೧೦.೧೦.೨೦೦೧ರಲ್ಲಿ ಸರ್ವೋಚ್ಛ ನ್ಯಾಯಾಲಯಕ್ಕೆ ೨೦೦೫ ಇಸವಿ ಡಿಸೆಂಬರ್ ೩೧ಕ್ಕೆ ಗಣಿಗಾರಿಕೆ ಸಂಪೂರ್ಣ ನಿಲ್ಲಿಸುವುದಾಗಿ ಕೊಟ್ಟಿರುವ ಮುಚ್ಚಳಿಕೆಯಿಂದ ಯಾವುದೆ ಕಾರಣಕ್ಕೂ ಹಿಂದೆ ಸರಿಯಬಾರದಾಗಿ ಕಳಕಳಿಯ ಮನವಿ ಮಾಡಿಕೊಳ್ಳುತ್ತೇವೆ. ಕರ್ನಾಟಕದ ಭವಿಷ್ಯದ ಬಗ್ಗೆ ಕಾಳಜಿಯುಳ್ಳ ತಾವು ನಮ್ಮ ಕಳವಳವನ್ನು ಅರ್ಥಮಾಡಿಕೊಳ್ಳುತ್ತೀರೆಂಬ ಭರವಸೆ ನಮಗಿದೆ.

ತಮ್ಮ ವಿಶ್ವಾಸಿ

ಕೆ. ಪಿ. ಪೂರ್ಣಚಂದ್ರ ತೇಜಸ್ವಿ
ಲೇಖಕ / ಪರಿಸರವಾದಿ

ಯು.ಆರ್. ಅನಂತಮೂರ್ತಿ
ಸಾಹಿತಿ

ಕೆ. ಉಲ್ಲಾಸ ಕಾರಂತ
ಹಿರಿಯ ಸಂರಕ್ಷಣ ವಿಜ್ಞಾನಿ

ಕೆ. ಎಂ. ಚಿಣ್ಣಪ್ಪ
ವನ್ಯಜೀವಿ ಸಂರಕ್ಷಣವಾದಿ

ಪ್ರವೀಣ್ ಭಾರ್ಗವ್
ವನ್ಯಜೀವಿ ಸಂರಕ್ಷಣವಾದಿ